ಜಿಲ್ಲಾಧಿಕಾರಿಗಳ ಕಾರ್ಯಾಲಯ, ಉತ್ತರ ಕನ್ನಡ, ಕಾರವಾರ – 581 301
OFFICE OF THE DEPUTY COMMISSIONER, UTTARA KANNADA DISTRICT, KARWAR, -581 301
ದೂರವಾಣಿ : 08382-226406,226471
Telephone: 08382-226603(Fax)
Email: dckarwar@gmail.com
Website: http://uttara kannada.nic.in

ನಂ. ಕಂಶಾ/ಭೂಸ್ವಾ/ವಿವ/ಇ–24977/2020–21 ದಿನಾಂಕ: 01–09–2020.

ವಿಷಯ: ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಬೇಲೇಕೇರಿ ಹೋಬಳಿಯಲ್ಲಿ ನಾಗರೀಕ ವಿಮಾನ ನಿಲ್ದಾಣ ನಿರ್ಮಾಣದ ಸಲುವಾಗಿ ಅಲಗೇರಿ, ಬೇಲೇಕೇರಿ ಹಾಗೂ ಭಾವಿಕೇರಿ ಗ್ರಾಮದಲ್ಲಿನ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳುವ ಕುರಿತು ಕಲಂ 11(1) ರಡಿಯಲ್ಲಿ ಸಿದ್ದಪಡಿಸಿದ ಪ್ರಾಥಮಿಕ ಅಧಿಸೂಚನೆಗೆ ಅನುಮೋದನೆ ನೀಡುವ ಕುರಿತು.

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ. ಮೂಅಇ/69/ರಾಅವಿ/2019 ದಿನಾಂಕ: 28–07–2020.
2. ಸರ್ಕಾರದ ಆದೇಶ ಸಂಖ್ಯೆ. ಮೂಅಇ/89/ರಾಅವಿ/2019 ದಿನಾಂಕ: 24–08–2020.
3. ವಿಶೇಷ ಭೂಸ್ವಾಧೀನಾಧಿಕಾರಿಗಳು ಹಾಗೂ ಸಹಾಯಕ ಕಮೀಷನರ್, ಕುಮಟಾ ರವರ ಪತ್ರ ಸಂಖ್ಯೆ. ಭೂಸ್ವಾ/ವಿವ–01/2020–2 ದಿನಾಂಕ: 31–08–2020.
4. ಸರ್ಕಾರದ ಅಧಿಸೂಚನೆ ಸಂಖ್ಯೆ. ಆರ್‌ಡಿ 02 ಎಕ್ಯೂಎನ್ 2020 ದಿನಾಂಕ: 31–08–2020.

**********

ಪ್ರಸ್ತಾವನೆ:

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನ ಅಲಗೇರಿ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿನ ಅಲಗೇರಿ ಗ್ರಾಮದಲ್ಲಿ ಭಾರತೀಯ ನೌಸೇನೆ ರವರು ನಿರ್ಮಿಸಲು ಉದ್ದೇಶಿಸಿರುವ ವಿಮಾನ ನಿಲ್ದಾಣವನ್ನು ಸಾರ್ವಜನಿಕರ ಉಪಯೋಗಕ್ಕೆ ವಿಸ್ತರಿಸುವ ದೃಷ್ಟಿಯಿಂದ ಸಿವಿಲ್ ಎನಕ್ಲೇವ್ ಅಭಿವೃದ್ಧಿಗಾಗಿ ಅಗತ್ಯವಿರುವ ಜಮೀನುಗಳ ಭೂಸ್ವಾಧೀನಕ್ಕೆ ಉಲ್ಲೇಖ (1) ರನ್ವಯ ಸರ್ಕಾರವು ಅನುಮೋದನೆ ನೀಡಿದೆ. ಅಲ್ಲದೇ ಭೂಸ್ವಾಧೀನಕ್ಕೆ ತಗಲುವ ವೆಚ್ಚವನ್ನು ಭರಿಸಲು ಅಗತ್ಯವಿರುವ ಅನುದಾನದ ಮೊದಲನೇಯ ಕಂತಿನ ಮೊತ್ತಾಗಿ ರೂ. 7.88 ಕೋಟಿಗಳನ್ನು ಸರ್ಕಾರವು ಉಲ್ಲೇಖ (2) ರಂತೆ ಮುಖ್ಯ ಕಾರ್ಯನಿರ್ವಾಹಕ ಹಾಗೂ ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಐ.ಐ.ಡಿ.ಸಿ ನಿಗಮ ನಿಯಮಿತ, ಬೆಂಗಳೂರು ರವರಿಗೆ ಬಿಡುಗಡೆ ಮಾಡಿದೆ.

ವಿಶೇಷ ಭೂಸ್ವಾಧೀನಾಧಿಕಾರಿಗಳು ಹಾಗೂ ಸಹಾಯಕ ಕಮೀಷನರ್, ಕುಮಟಾ ರವರು ನಾಗರೀಕ ವಿಮಾನ ನಿಲ್ದಾಣ ಸ್ಥಾಪನೆಗೆ ಭೂಸ್ವಾಧೀನಪಡಿಸಬೇಕಾದ ಭೂಮಿಗಳನ್ನು ನೌಸೇನಾ ಅಧಿಕಾರಿಗಳೊಂದಿಗೆ ಗುರುತಿಸಿ ಕಲಂ 11(1) ರಡಿ ಕರಡು ಪ್ರಾಥಮಿಕ ಅಧಿಸೂಚನೆಯನ್ನು ಉಲ್ಲೇಖ (3) ರನ್ವಯ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ. ಅದರನ್ವಯ, ಅಲಗೇರಿ ಗ್ರಾಮದ ಒಟ್ಟೂ ಕ್ಷೇತ್ರ 69–21–02 (ಎ–ಗುಂ–ಆ), ಬೇಲೇಕೇರಿ ಗ್ರಾಮದ ಒಟ್ಟೂ ಕ್ಷೇತ್ರ 20–35–15 (ಎ–ಗುಂ–ಆ) ಹಾಗೂ ಭಾವಿಕೇರಿ ಗ್ರಾಮದ ಒಟ್ಟೂ ಕ್ಷೇತ್ರ 03–12–04 (ಎ–ಗುಂ–ಆ) ಜಮೀನುಗಳು ಭೂಸ್ವಾಧೀನಕ್ಕೆ ಒಳಪಡಿಸಬೇಕಾಗಿರುತ್ತದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಸೂಕ್ತ ಪರಿಹಾರದ ಹಕ್ಕು ಮತ್ತು ಪುನರ್ವಸತಿ ಮತ್ತು ಪುನರ್ ನಿರ್ಮಾಣ (ಕರ್ನಾಟಕ ತಿದ್ದುಪಡಿ) ಕಾಯ್ದೆ 2013 ಕಲಂ–3 ರ ಅಧ್ಯಾಯ -3(ಎ) ರ ಕಲಂ–10(ಎ) ರಡಿ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನಲ್ಲಿ ನಾಗರೀಕ ವಿಮಾನ ನಿಲ್ದಾಣವನ್ನು ನಿರ್ಮಿಸಲು ಅಗತ್ಯವಿರುವ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲು 2013 ರ ಮೂಲ ಭೂಸ್ವಾಧೀನ ಕಾಯ್ದೆಯ ಅಧ್ಯಾಯ–2 ರಡಿ ಸಾಮಾಜಿಕ ಪರಿಣಾಮಗಳ ಅಧ್ಯಾಯನ ಮಾಡುವುದರಿಂದ ಹಾಗೂ ಅಧ್ಯಾಯ–3 ರ ಕಲಂ 10 ನ್ನು ಅನ್ವಯಿಸುವುದರಿಂದ ಸರ್ಕಾರವು ಉಲ್ಲೇಖ (4) ರನ್ವಯ ವಿನಾಯಿತಿ ನೀಡಿ ಆದೇಶಿಸಿದೆ.

ಆದ್ದರಿಂದ, ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನಲ್ಲಿ ನಿರ್ಮಿಸಲು ಉದ್ದೇಶಿಸಿರುವ ನಾಗರೀಕ ವಿಮಾನ ನಿಲ್ದಾಣಕ್ಕೆ ಅಗತ್ಯವಿರುವ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಸೂಕ್ತ ಪರಿಹಾರದ ಹಕ್ಕು ಮತ್ತು ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013 ಕಲಂ 11(1) ರಡಿಯಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿಗಳು ಹಾಗೂ ಸಹಾಯಕ ಕಮೀಷನರ್, ಕುಮಟಾ ರವರು ಸಿದ್ದಪಡಿಸಿ ಉಲ್ಲೇಖ (3) ರಂತೆ ಸಲ್ಲಿಸಿದ ಕರಡು ಪ್ರಾಥಮಿಕ ಅಧಿಸೂಚನೆ ಕ್ರಮಬದ್ಧವಾಗಿರುವುದು ಮತ್ತು ಕಲಂ 12 ರಡಿಯಲ್ಲಿ ಮುಂದುವರೆಯುವುದು ಸೂಕ್ತ ಎಂದು ಮನಗಂಡು ಈ ಕೆಳಗಿನಂತೆ ಆದೇಶ ಮಾಡಿದೆ.

-:ಆದೇಶ:-

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ಮತ್ತು ನನ್ನಲ್ಲಿ ಪ್ರದತ್ತವಾದ ಅಧಿಕಾರದ ಮೇರೆಗೆ ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲೂಕಿನಲ್ಲಿ ಸ್ಥಾಪಿಸಲು ಉದ್ದೇಶಿಸಿದ ನಾಗರೀಕ ವಿಮಾನ ನಿಲ್ದಾಣಕ್ಕೆ ಅಗತ್ಯವಿರುವ ಅಂಕೋಲಾ ತಾಲೂಕಿನ ಬೇಲೇಕೇರಿ ಹೋಬಳಿಯ ಅಲಗೇರಿ, ಬೇಲೇಕೇರಿ ಹಾಗೂ ಭಾವಿಕೇರಿ ಗ್ರಾಮದ ಒಟ್ಟೂ ಕ್ಷೇತ್ರ 93–29–05 (ಎ–ಗುಂ–ಆ) ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳುವ

ಬಗ್ಗೆ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಸೂಕ್ತ ಪರಿಹಾರದ ಹಕ್ಕು ಮತ್ತು ಪುನರ್ವಸತಿ ಮತ್ತು ಪುನರ್ ನಿರ್ಮಾಣ ಕಾಯ್ದೆ 2013 ಕಲಂ 11(1) ರಡಿಯಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿಗಳು ಹಾಗೂ ಸಹಾಯಕ ಕಮೀಷನರ್, ಕುಮಟಾ ರವರು ಉಲ್ಲೇಖ (3) ರನ್ವಯ ಸಿದ್ಧಪಡಿಸಿದ ಕರಡು ಪ್ರಾಥಮಿಕ ಅಧಿಸೂಚನೆಗೆ ಅನುಮೋದನೆ ನೀಡಿದೆ ಹಾಗೂ ಅಧಿಸೂಚನೆಯಲ್ಲಿ ಒಳಗೊಂಡ ಜಮೀನುಗಳನ್ನು ಸ್ವಾಧೀನಪಡಿಸಿಕೊಳ್ಳುವ ದೃಷ್ಟಿಯಿಂದ ಕಲಂ 12 ರಡಿಯಲ್ಲಿ ಅಧಿಕಾರವನ್ನು ಚಲಾಯಿಸಲು ವಿಶೇಷ ಭೂಸ್ವಾಧೀನಾಧಿಕಾರಿಗಳು ಹಾಗೂ ಸಹಾಯಕ ಕಮೀಷನರ್, ಕುಮಟಾ ರವರನ್ನು ಅಧಿಕೃತಗೊಳಿಸಿ ಆದೇಶಿಸಿದೆ.

ಜಿಲ್ಲಾಧಿಕಾರಿ,
ಉತ್ತರ ಕನ್ನಡ, ಕಾರವಾರ.

ಪ್ರತಿಯನ್ನು ಅನುಮೋದಿತ ಅಧಿಸೂಚನೆಯೊಂದಿಗೆ:-

1) ಉಪ ನಿರ್ದೇಶಕರು, ಸರಕಾರಿ ಶಾಖಾ ಮುದ್ರಣಾಲಯ ಧಾರವಾಡ ರವರಿಗೆ
 2/- ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಹಾಗೂ ಪ್ರಕಟಿಸಲು ಪಟ್ಟ ಅಧಿಸೂಚನೆಯ 10 ಪ್ರತಿಗಳನ್ನು ಈ ಕಾರ್ಯಾಲಯಕ್ಕೆ ಸಲ್ಲಿಸಲು ಕೋರಿದೆ.
2) ವಿಶೇಷ ಭೂಸ್ವಾಧೀನಾಧಿಕಾರಿಗಳು ಹಾಗೂ ಸಹಾಯಕ ಕಮೀಷನರ್, ಕುಮಟಾ ರವರಿಗೆ ಅಗತ್ಯ ಕ್ರಮದ ಕುರಿತು ಕಳುಹಿಸಿದೆ.
3) ಮುಖ್ಯ ಹಣಕಾಸು ಹಾಗೂ ಲೆಕ್ಕಾಧಿಕಾರಿಗಳು, ಕೆ.ಎಸ್.ಐ.ಐ.ಡಿ.ಸಿ ನಿಗಮ ನಿಯಮಿತ, ಬೆಂಗಳೂರು ರವರಿಗೆ
 2/- ಭೂಸ್ವಾಧೀನದ ವೆಚ್ಚವನ್ನು ತಕ್ಷಣ ವಿಶೇಷ ಭೂಸ್ವಾಧೀನಾಧಿಕಾರಿಗಳು ಹಾಗೂ ಸಹಾಯಕ ಕಮೀಷನರ್, ಕುಮಟಾ ರವರ ಖಾತೆಗೆ ಜಮಾ ಮಾಡಲು ಕೋರಿದೆ.
4) ಸಹಾಯಕ ನಿರ್ದೇಶಕರು, ವಾರ್ತಾ ಇಲಾಖೆ, ಕಾರವಾರ ರವರಿಗೆ
 2/- ಈ ಪತ್ರಕ್ಕೆ ಲಗತ್ತಿಸಿದ ಅಧಿಸೂಚನೆಗಳನ್ನು ಉತ್ತರ ಕನ್ನಡ ಜಿಲ್ಲೆಗೆ ಸಂಬಂಧಿಸಿದ ಜಿಲ್ಲಾ ಮಟ್ಟದ ಎರಡು ಕನ್ನಡ ದಿನ ಪತ್ರಿಕೆಗಳಲ್ಲಿ ಪ್ರಕಟಿಸುವ ಕುರಿತು ಕ್ರಮ ಜರುಗಿಸಲು ಕೋರಿದೆ.
5) ತಹಶೀಲ್ದಾರ, ಅಂಕೋಲಾ ರವರಿಗೆ ಕಛೇರಿಯ ನೋಟಿಸ್ ಬೋರ್ಡಿಗೆ ಅಂಟಿಸಿ ಫಾಯಿಸಿ ಮಾಡಲು ಕಳುಹಿಸಿದೆ.
6) ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ ಅಂಕೋಲಾ ರವರಿಗೆ ಕಛೇರಿಯ ನೋಟಿಸ್ ಬೋರ್ಡಿಗೆ ಅಂಟಿಸಿ ಫಾಯಿಸಿ ಮಾಡಲು ಕಳುಹಿಸಿದೆ.
7) ಜಿಲ್ಲಾ ಮಾಹಿತಿ ಅಧಿಕಾರಿ, ಎನ್ಐಸಿ, ಜಿಲ್ಲಾ ಪಂಚಾಯತ ರವರಿಗೆ ಅಧಿಸೂಚನೆಯನ್ನು ಜಿಲ್ಲಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಿದೆ.

ಪ್ರತಿಯನ್ನು ಅನುಮೋದಿತ ಅಧಿಸೂಚನೆಯನ್ನು ಗೌರವಪೂರ್ವಕ ಸಲ್ಲಿಸಿದೆ.

1) ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಮೂಲಭೂತ ಸೌಲಭ್ಯ ಅಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು.

Deputy Commissioner Uttara Kannada Dist. ಕಾರವಾರ

ಜಿಲ್ಲಾಧಿಕಾರಿ,
ಉತ್ತರ ಕನ್ನಡ, ಕಾರವಾರ.

03/09/2020.